(ಈ ಘಟ್ಟದಲ್ಲಿ ಕಾಂಗ್ರೆಸ್ 'ಐ' ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಎಂ. ಚಂದ್ರಶೇಖರ್.—ಇದರ ಜೊತೆಗೆ ಹೊರಗೆ ಉಪ ಚುನಾವಣೆಯ ಫಲಿತಾಂಶ ಕೂಡ ಬರುತ್ತಾ ಇದೆ. ಇಲ್ಲಿ ಕುಳಿತುಕೊಂಡು ಅದನ್ನು ಕೇಳುವುದಕ್ಕಾಗುವುದಿಲ್ಲವೆಂದು ಹೊರಗೆ ಹೋಗುತ್ತಿದ್ದಾರೆ. ಎರಡೂ ಕಡೆ ವಿರೋಧಪಕ್ಷದವರಾದ ನಾವು ಗೆದ್ದಿದ್ದೇವೆ. ಇನ್ನೊಂದು ಕಡೆಯೂ ಗೆಲ್ಲುತ್ತೇವೆ. ಅದೂ ಕೂಡ ಅವರಿಗೆ ನಾಚಿಕೆಯಾಗಿದೆ. ಈ ವಿಚಾರದಲ್ಲಿ ವಿನಾಯಿತಿಯನ್ನು ಕಾನೂನಿಗನುಗುಣವಾಗಿ ಕೊಟ್ಟಿದ್ದೇವೆ. ಕಾಯಿದೆಯಲ್ಲಿ ಈ ಬಗ್ಗೆ ರೂಲೇ ಇದೆ. ಆದ್ದರಿಂದ ಇದರಲ್ಲಿ ಯಾವುದೇ ರೀತಿಯ ಕಾನೂನು ಉಲ್ಲಂಘನೆಯಾಗಿಲ್ಲ ಎಂಬುದು ನಮ್ಮ ಅಭಿಪ್ರಾಯ.

ಅಧ್ಯಕ್ಷರು.—ಇಲ್ಲಿಗೆ ಚರ್ಚೆ ಮುಕ್ತಾಯವಾಯಿತು.

ಶ್ರೀ ಆರ್. ಎಲ್. ಜಾಲಪ್ಪ.—1983ರವರೆಗೆ ಈ ತರಹ ಎಷ್ಟು ಕೇಸುಗಳನ್ನು ಅವರ ಸರ್ಕಾರ ಇವ್ಹಾಗ ಪರ್ಮಿಷನ್ ಕೊಟ್ಟಿದೆ? ಎಷ್ಟು ಲಕ್ಷ ವಿಸ್ತೀರ್ಣ ಪರ್ಮಿಷನ್ ಕೊಟ್ಟಿದ್ದಾರೆಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಎಂ. ಚಂದ್ರಶೇಖರ್.—ಸದ್ಯಕ್ಕೆ ಆ ವಿವರ ಇಲ್ಲ. ಸಮಯ ಸಿಕ್ಕಾಗ ಅದನು ಹೇಳುವುದಕ್ಕೆ ಅವಕಾಶ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ನಮ್ಮ ರಾಜ್ಯದಲ್ಲಿ ೧೯೮೧-೮೨ರಲ್ಲಿ ಹಾರ್ಡ್‌ಶಿಪ್ ಗೋಸ್ಕರ ಎಷ್ಟು ಕನ್‌ವರ್ಷನ್ ಮಾಡಿಕೊಟ್ಟಿದ್ದೀರಿ?

ಶ್ರೀ ಎಂ. ಚಂದ್ರಶೇಖರ್.—ಆ ಬಗ್ಗೆ ನನ್ನ ಹತ್ತಿರ ವಿವರ ಸದ್ಯಕ್ಕೆ ಇಲ್ಲ. ಬೇರೆ ಬೇರೆ ರಾಜ್ಯಗಳಲ್ಲಿನ ವಿನಾಯಿತಿ ಬಗ್ಗೆ ಮಾನ್ಯ ರೆವಿನ್ಯೂ ಮಂತ್ರಿಗಳು ವಿವರಣೆ ಕೊಟ್ಟಿರುವರು. ನಾನು ಬೆಂಗಳೂರಿಗೆ ಸೀಮಿತವಾಗಿ ಹೇಳುತ್ತೇನೆ. Exemption granted under Urban Land Ceiling Act in Bangalore ender Urban Agglomeration Area. ೧೯೭೫ರಲ್ಲಿ ಅಗ್ರಿಕಲ್ಚರ್‌ಗೆ ೮, ಕೈಗಾರಿಕೆಗೆ ಳಳ೦ ಕೇಸ್‌ಗಳಲ್ಲಿ ಎಕ್ಸಂಪ್ಷನ್ ಸಿಕ್ಕಿದೆ. ಹಾಗೂ ವಸತಿ ಹಾಗೂ ಸಂಕಷ್ಟ ಪರಿಹಾರಕ್ಕೆ ಎಕ್ಸಂಪ್ಷನ್ ಸಿಕ್ಕಿಲ್ಲ. ಹಾಗೆಯೇ ೧೯೭೮ರಲ್ಲಿ ಕೃಷಿಗೋಸ್ಕರವಾಗಿ ೧೧, ಕೈಗಾರಿಕೆಗಾಗಿ ೬೭, ವಸತಿಗಾಗಿ ೨೩, ಸಂಕಷ್ಟ ಪರಿಹಾರಕ್ಕಾಗಿ ೬೯ ಸಿಕ್ಕಿದೆ. ೧೯೭೯ರಲ್ಲಿ ಕೃಷಿಗೆ ೪, ಕೈಗಾರಿಕೆಗಾಗಿ ೭೪, ವಸತಿಗೆ ೨, ಸಂಕಷ್ಟ ನಿವಾರಣೆಗೆ ೧೨ಕ್ಕೆ ವಿನಾಯಿತಿ ಸಿಕ್ಕಿದೆ. ೧೯೮೦ರಲ್ಲಿ ಕೃಷಿಗೆ ೮, ಕೈಗಾರಿಕೆಗೆ ೧೨೦, ವಸತಿಗೆ ೨೪ ಹಾಗೂ ಸಂಕಷ್ಟಕ್ಕೆ ೨೭ ಪ್ರಕರಣಗಳಿಗೆ ಸಿಕ್ಕಿವೆ.

ಶ್ರೀ ಎಂ. ರಘುಪತಿ.—ಕಾಂಗ್ರೆಸ್‌ನ ಗೋಲ್ಡನ್ ಪೀರಿಯಡ್ ಇದು.

ಶ್ರೀ ಎಂ. ಚಂದ್ರಶೇಖರ್.—೧೯೮೧ರಲ್ಲಿ ಕೃಷಿಗೆ ೨೫, ಕೈಗಾರಿಕೆಗೆ ೪೫, ವಸತಿಗೆ ೨೭ ಹಾಗೂ ಸಂಕಷ್ಟಕ್ಕೆ ೨೦. ಹಾಗೇ ೧೯೮೨ರಲ್ಲಿ ಕೃಷಿಗೆ ೧೩, ಕೈಗಾರಿಕೆಗೆ ೧೫೫, ವಸತಿಗೆ ೨೧, ಹಾಗೂ ಸಂಕಷ್ಟಕ್ಕೆ ೧೦ ಪ್ರಕರಣಗಳಿಗೆ ವಿನಾಯಿತಿ ಸಿಕ್ಕಿದೆ. ಅಧ್ಯಕ್ಷರೇ, ಇದರಲ್ಲಿ ವಿನಾಯಿತಿ ಕೊಡುವುದರಲ್ಲಿ ಏನೂ ತಪ್ಪಿಲ್ಲ. ಕಾಯ್ದೆಯಲ್ಲಿ ಇದಕ್ಕೆ ಅವಕಾಶ ಇದೆ. ಇವತ್ತು ಆತನಲ್ಲಿ ಜಮೀನು ಇರುತ್ತದೆ. ಆ ಜಮೀನುದಾರ ಇವತ್ತಿನದಿವಸ ಆ ಜಮೀನುದಾರ ಉತ್ತು ಬಿತ್ತು ಜೀವನವನ್ನು ಮಾಡುತ್ತಾ ಇರುತ್ತಾನೆ. ಸಿ. ಡಿ. ಪಿ. ಲ್ಯಾಂಡ್ ರಿವೈಸ್ ಆದಮೇಲೆ ಅರ್ಬನ್ ಲ್ಯಾಂಡ್ ಎಂದು ಕರೆಯುತ್ತೇವೆ. ಹೊಟ್ಟೆಪಾಡಿಗೆ ಅವನು ಅಲ್ಲಿ ಜಮೀನು ಮಾಡುತ್ತಿರುತ್ತಾನೆ. ಆದ್ದರಿಂದ ಎಲ್ಲಿಯವರೆಗೆ ನಾನು ಕೃಷಿ ಮಾಡುತ್ತಿರುತ್ತೇನೋ ಅಲ್ಲಿಯವರೆಗೆ ವಿನಾಯಿತಿ ಕೊಡಿ, ಯಾವಾಗ ಕೃಷಿ ಮಾಡುವುದನ್ನು ಬಿಡುತ್ತೇನೆ ಆಗ ನಗರಕ್ಕೆ ಉಪಯೋಗ ಮಾಡಿ ಎಂದು ಹೇಳಿದಾಗ ಕಾಯ್ದೆಯಲ್ಲಿ ಅದಕ್ಕೆ ಅವಕಾಶ ಇದೆ. ಅದನ್ನು ಕೊಡಬಹುದು. ಅದೇ ರೀತಿಯಲ್ಲಿ ಗ್ರೂಪ್ ಹೌಸಿಂಗ್, ನಗರ ಪ್ರದೇಶದಲ್ಲಿರುವ ವಸತಿ ಗೋಸ್ಕರ ಬೇಕಾಗುತ್ತದೆ. ವ್ಯವಸಾಯಗಾರನಾಗಿ ಆಸ್ತಿಯನ್ನು ಸಂಪಾದನೆ ಮಾಡಬೇ ಇರುವ ವ್ಯಕ್ತಿಗೆ ಕಷ್ಟ ಬಂದಾಗ, ತೊಂದರೆಯಾದಾಗ ಸಾಲಸೋಲ ಹೆಚ್ಚಾದ್ದನ್ನು ನಿವಾರಣೆ ಮಾಡಿಕೊಳ್ಳಬೇಕಾದರೆ ತನ್ನ ಜಮೀನನ್ನು ಮಾರಿ ನಿವಾರಣೆ ಮಾಡಿಕೊಳ್ಳುವುದು ಇದೆ. ಇದಕ್ಕೆ ಅವಕಾಶ ಇಲ್ಲದಿದ್ದರೆ ಆತ ಎಲ್ಲಿಗೆ ಹೋಗಬೇಕು? ಆತ ಜೈಲಿಗೆ ಹೋಗಬೇಕಷ್ಟೇ. ಅವರು ಹಾರ್ಡ್‌ಶಿಪ್ ಎಂದು ಹೇಳಿ ಅರ್ಜಿ ಹಾಕಿಕೊಳ್ಳುತ್ತಾನೆ. ಕಾನೂನು ಬದ್ಧವಾದ ವಿನಾಯಿತಿ ಇದು. ವಿನಾಯಿತಿಯನ್ನು ನೋಡುವುದರಲ್ಲಾಗಲಿ, ಆರ್ಥಿಕ ಸಂಕಷ್ಟಗಳನ್ನು ನಿವಾರಣೆ ಮಾಡುವ ಉದ್ದೇಶಕ್ಕಾಗಿ ಪರವಾನಗಿಯನ್ನು ಕೊಡುವುದಕ್ಕೆ ಕಾನೂನಿನಲ್ಲೇ ಅವಕಾಶ ಇದುವುದರಿಂದ ಆ ಪ್ರಕಾರ ಅವರಿಗೆ ಪರವಾನಗಿಯನ್ನು